CS (MAIN) EXAM, 2011

Serial No.

F–DTN–L–SAD–G

# KANNADA

## (Compulsory)

*Time Allowed : Three Hours* | *Maximum Marks : 300*

## INSTRUCTIONS

*Candidates should attempt **ALL** questions.*

*The number of marks carried by each question is indicated at the end of the question.*

*Answers must be written in **Kannada,** unless otherwise directed.*

*Prescribed word-limit must be followed for Q. No. 3. The precis must be attempted **only** on the special precis sheets attached to this question paper. These precis sheets are to be carefully detached from the question paper and securely attached to the answer book.*

1. ಕೆಳಗೆ ನೀಡಿರುವ ಯಾವುದಾದರೂ **ಒಂದು** ವಿಷಯವನ್ನು ಕುರಿತು 300 ಶಬ್ದಗಳಲ್ಲಿ ಒಂದು ಪ್ರಬಂಧವನ್ನು ಬರೆಯಿರಿ :– 100

(a) ರಾಜಕೀಯ ಮತ್ತು ವೈಯುಕ್ತಿಕ ನೈತಿಕತೆ.

(b) ಸಾಮಾಜಿಕ ಪ್ರಗತಿಯ ಪ್ರಮುಖ ಚಲನಶೀಲ ಶಕ್ತಿಯಾಗಿ ಧರ್ಮ ಅಥವಾ ವಿಜ್ಞಾನ.



(Contd.)

(c) ಎಲ್ಲರಿಗೂ ಆಹಾರ: ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಗೆ ಒಂದು ಸವಾಲು.

(d) ಆತುರದ ಸಂಸ್ಕೃತಿ ಅಪಕ್ವತೆ ಮತ್ತು ಅಪರಾಧಗಳನ್ನು ಹುಟ್ಟು ಹಾಕುತ್ತದೆ.

(e) ಮಾನವನ ಮಿದುಳಿಗೆ ಪರ್ಯಾಯವಾಗಿ ಯಾಂತ್ರಿಕ ಬುದ್ಧಿವಂತಿಕೆ.

2. ಕೆಳಗೆ ನೀಡಿರುವ ಗದ್ಯಭಾಗವನ್ನು ಓದಿ ಕೊನೆಯಲ್ಲಿ ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ. ನಿಮ್ಮ ಉತ್ತರಗಳು ನೇರ, ಸ್ಪಷ್ಟ ಮತ್ತು ಸಂಕ್ಷಿಪ್ತವಾಗಿರಲಿ :- 6×10=60

ನಾವು ತೀವ್ರಗತಿಯ ಔದ್ಯಮೀಕರಣ ಪ್ರಕ್ರಿಯೆಯ ಮೂಲಕ ಸಾಗುತ್ತಿದ್ದೇವೆ ಮತ್ತು ಬೃಹತ್ ಪ್ರಮಾಣದ ಕೆಲಸಗಾರರನ್ನು ನಮ್ಮ ಉದ್ಯಮಗಳಲ್ಲಿ ತೊಡಗಿಸಿದ್ದೇವೆ. ಈ ಹಿನ್ನೆಲೆಯಲ್ಲಿ ಇಂದಿನ ಭಾರತದಲ್ಲಿ ನೀವು ಮಾಡಬೇಕಾಗಿರುವ ಕೆಲಸದ ಬಗ್ಗೆ ನಿಮಗೆ ಏನು ಗೊತ್ತಿದೆ ಎಂಬ ಅಂಶ ಮುಖ್ಯವಲ್ಲ; ಬದಲಿಗೆ ನೀವು ಯಾರುಯಾರನ್ನು ಬಲ್ಲಿರಿ ಎಂಬುದು ಮುಖ್ಯವಾಗುತ್ತದೆ – ಅಂದರೆ ಕೆಲಸ ಗಳಿಸಲು ಅರ್ಹತೆಗಿಂತ ಪ್ರಭಾವ ಮುಖ್ಯ ಎಂಬ ಅನಿಸಿಕೆ ಆಳವಾಗಿ ಬೇರೂರಿರುವಂತೆ ಕಾಣುತ್ತದೆ. ಜನತೆ ಒಳ್ಳೆಯ ಪರಿಣಾಮಗಳಿಗೆ ಅರ್ಹತೆ ಅಗತ್ಯ ಎಂದು ಭಾವಿಸುವಂತೆ ಕಾಣುವುದಿಲ್ಲ. ನಮ್ಮ ವಿದ್ಯಾಭ್ಯಾಸ ಪದ್ಧತಿಯಲ್ಲಿ ಉನ್ನತ ಪ್ರತಿಭೆಯ ಬೆಳೆಸುವಿಕೆಗೆ ಒಂದು ನಿರ್ದಿಷ್ಟ ಸ್ಥಾನವಿದ್ದು ಅಂತಹ ಪ್ರತಿಭೆಗೆ ಸೂಕ್ತ ಸ್ಥಾನಮಾನಗಳು ಸಿಗದೆ ಹೋದಲ್ಲಿ ಅದಕ್ಕೆ ಅಗೌರವ ಸಂದಂತಾಗುತ್ತದೆ. ಇದು ಬಂದತ್ತ ನಮ್ಮ ವಿದ್ಯಾಭ್ಯಾಸ ವ್ಯವಸ್ಥೆಯನ್ನು ದೂಷಣೆ ಮಾಡಿದಂತಾಗುತ್ತದಲ್ಲದೆ ಇನ್ನೊಂದತ್ತ ಸಾಮಾಜಿಕ ವಿದ್ಯಾಭ್ಯಾಸದ ಚಳುವಳಿಯೊಂದನ್ನು ಹುಟ್ಟುಹಾಕುವ ಆಶಯವನ್ನು ಕಿವುಚಿಹಾಕಿದಂತೆ ಮಾಡುತ್ತದೆ.

ಸೇತುವೆಯೊಂದನ್ನು ಕಟ್ಟುವಾಗ ಅಥವಾ ರಸ್ತೆಯೊಂದನ್ನು ನಿರ್ಮಿಸುವಾಗ ಒಂದು ನಿರ್ದಿಷ್ಟ ಪ್ರಮಾಣದ ಮರಳು, ಸಿಮೆಂಟು, ಸುಣ್ಣ ಮುಂತಾದವುಗಳನ್ನು ಸಮರ್ಪಕವಾಗಿ ಹಾಕುವುದರ ಮೂಲಕ ಅವುಗಳನ್ನು ಸಬಲವಾಗಿ ನಿರ್ಮಿಸಲು ಸಾಧ್ಯ ಹಾಗೂ ಅವುಗಳು ದೀರ್ಘಕಾಲ ಉಳಿಯಲು ಸಾಧ್ಯ. ಆದರೆ ನಮ್ಮ ಅನುಭವ ಈ ದಿಕ್ಕಿನಲ್ಲಿ ಒಂದು ಅಧೋಗತಿಯ ಜಾರುವಿಕೆಯ ಕಥನವನ್ನು ಹೇಳುತ್ತಿದೆ ಹಾಗೂ ನಾವು ಅಣಿಕಟ್ಟೆಯೊಂದರ ಬಿರುಕುಗಳ ಬಗ್ಗೆ ಅಥವಾ ರಸ್ತೆಯೊಂದು ಮಳೆಯಿಂದ ಕೊಚ್ಚಿಹೋಗುವುದರ ಬಗ್ಗೆ ಕೇಳುತ್ತೇವೆ.

ಇದು ಕೇವಲ ಔಪಯೋಗಿಕ ವಸ್ತುಗಳ ಗುಣಮಟ್ಟದ ನಿಯಂತ್ರಣಕ್ಕಷ್ಟೇ ಅಲ್ಲದೆ ಸಾರ್ವಜನಿಕರು ಹಾಗೂ ಅವರ ಹೊಣೆಗಾರಿಕೆಗಳಿಗೆ ಕೂಡ ಅನ್ವಯಿಸುತ್ತದೆ.

ದುರದೃಷ್ಟವಶದಿಂದ ಪ್ರಜಾಪ್ರಭುತ್ವ ವ್ಯವಸ್ಥೆ ಪ್ರತಿಭೆಯನ್ನು ಸುವ್ಯವಸ್ಥಿತವಾಗಿ ಕಡೆಗಾಣಿಸುವ ಕೆಲವು ಸಂದರ್ಭಗಳನ್ನು ಸೃಷ್ಟಿ ಮಾಡಿದೆಯಲ್ಲದೆ ಸಾರ್ವಜನಿಕರು ಈ ದೇಶದಲ್ಲಿ ಅರ್ಹತೆ ಪದೇಪದೇ ಅವಗಣನೆಗೊಳಗಾಗಿದೆ ಎಂದು ಹೇಳುವುದನ್ನು ಕೇಳುವಂತಾಗಿದೆ. ಇದು ಸೂಕ್ತ ಅರ್ಹತೆ, ದಕ್ಷತೆ ಹಾಗೂ ನೈತಿಕ ಸಾಮರ್ಥ್ಯಗಳನ್ನು ಹೊಂದಿರದಿದ್ದರೂ ವ್ಯಕ್ತಿಗಳು ಸಾರ್ವಜನಿಕ ಆಡಳಿತ ವ್ಯವಸ್ಥೆಯನ್ನು ಆಕ್ರಮಿಸಲು ಹಾಗೂ ಸಾರ್ವಜನಿಕ ವ್ಯವಹಾರವನ್ನು ನಡೆಸಲು ಸಾಧ್ಯ ಎಂಬ ಅಸಹನೀಯ ಅನಿಸಿಕೆಯೊಂದನ್ನು ತಂದಿದೆ.

**ಪ್ರಶ್ನೆಗಳು :**

(a) ಒಂದು ಒಳ್ಳೆಯ ಉದ್ಯೋಗವನ್ನು ಗಳಿಸುವುದು ಹೇಗೆ ಎಂದು ಈ ದೇಶದ ಜನತೆ ಭಾವಿಸುತ್ತದೆ ?

(b) ಅರ್ಹತೆಯ ಬಗ್ಗೆ ನಮಗೆ ಇರುವ ಗೌರವವನ್ನು ನಾವು ಯಾವ ಸಂದರ್ಭದಲ್ಲಿ ಕಳೆದು ಕೊಳ್ಳುತ್ತೇವೆ ?

(c) ಅರ್ಹತೆಯ ಬಗ್ಗೆ ಉಂಟಾಗಿರುವ ಅಗೌರವ ಎಂತಹ ದುಷ್ಪರಿಣಾಮಗಳನ್ನು ಉಂಟುಮಾಡಬಲ್ಲದು ?

(d) ಜನತೆಯು ಅಪೇಕ್ಷಿಸುವ ಜವಾಬ್ದಾರಿಗಳ ಬಗ್ಗೆ ಅಲಕ್ಷ್ಯ ತೋರಿದರೆ ಅದರ ಪರಿಣಾಮ ಏನಾಗುತ್ತದೆ ?

(e) ಅರ್ಹತೆ, ದಕ್ಷತೆ ಹಾಗೂ ನೈತಿಕ ಸಾಮರ್ಥ್ಯಗಳನ್ನು ಉಪೇಕ್ಷೆ ಮಾಡುವಿಕೆಯ ಹಿಂದಿನ ಕಾರಣಗಳೇನು ?

(f) ಈ ಗದ್ಯ ಭಾಗದ ಹಿನ್ನೆಲೆಯಲ್ಲಿರುವ ಕಳಕಳಿಯನ್ನು ವಿವರಿಸಿ.

3. ಕೆಳಗೆ ನೀಡಿರುವ ಗದ್ಯ ಭಾಗವನ್ನು 190 ಪದಗಳಿಂದ 210 ಪದಗಳಿಗೆ ಮೀರದಂತೆ ಸಂಗ್ರಹ ಲೇಖನವೊಂದನ್ನು ಬರೆಯಿರಿ. ಸಂಗ್ರಹ ಲೇಖನವನ್ನು ಅದಕ್ಕೆಂದೇ ಪ್ರತ್ಯೇಕವಾಗಿ ನೀಡಿರುವ ಹಾಳೆಗಳಲ್ಲಿ ಬರೆಯಬೇಕು. ಸಂಗ್ರಹಲೇಖನ ನಿಗದಿ ಪಡಿಸಿರುವ ಪದಮಿತಿಗಿಂತ ಹೆಚ್ಚು ಅಥವಾ ಕಡಿಮೆಯಾದಲ್ಲಿ ಅದಕ್ಕನುಗುಣವಾಗಿ ಅಂಕಗಳನ್ನು ಕಳೆಯಲಾಗುವುದು. 150 ಪದಗಳಿಗಿಂತ ಕಡಿಮೆ ಅಥವಾ 250 ಪದಗಳಿಗಿಂತ ಹೆಚ್ಚಾದ ಸಂಗ್ರಹಲೇಖನವನ್ನು ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. 60

ನನ್ನ ತಂದೆ ಪೋರ್‌ಬಂದರನ್ನು ಬಿಟ್ಟು ರಾಜ್‌ಕೋಟ್‌ಗೆ ರಾಜರ ಆಸ್ಥಾನದ ಸದಸ್ಯರಾಗಲು ಹೊರಟಾಗ ನಾನು ಬಹುಷಃ ಏಳು ವರ್ಷದವನಿದ್ದಿರಬೇಕು. ಅಲ್ಲಿ ನನ್ನನ್ನು ಪ್ರಾಥಮಿಕ ಶಾಲೆಗೆ ಸೇರಿಸಲಾಯಿತು ಹಾಗೂ ಆ ದಿನಗಳನ್ನು ನಾನಿನ್ನೂ ನನ್ನ ನೆನಪಿಗೆ ತರಬಲ್ಲೆ, ನನಗೆ ಪಾಠ ಮಾಡಿದ ಉಪಾಧ್ಯಾಯರ ಹೆಸರು ಮುಂತಾದ ವಿವರಗಳನ್ನು ಕುರಿತಂತೆ. ಪೋರ್‌ಬಂದರಿನಂತೆ ಇಲ್ಲೂ ಕೂಡ ನನ್ನ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ಹೇಳಿಕೊಳ್ಳುವಂತಹುದೇನೂ ಇಲ್ಲ. ನಾನು ಕೇವಲ ಒಬ್ಬ ಮಧ್ಯಮ ಮಟ್ಟದ ವಿದ್ಯಾರ್ಥಿಯಾಗಿದ್ದೆ ಅಷ್ಟೆ.

ಈ ಶಾಲೆಯಿಂದ ನಾನು ಮುಂದಕ್ಕೆ ಅಲ್ಲಿನ ಉಪನಗರದ ಶಾಲೆಯೊಂದಕ್ಕೆ ಸೇರಿಕೊಂಡೆ ಹಾಗೂ ಅಲ್ಲಿಂದ ಮುಂದಕ್ಕೆ ಹನ್ನೆರಡನೆಯ ವಯಸ್ಸನ್ನು ತಲುಪಿದೆನಾಗಿ ಪ್ರೌಢಶಾಲೆಗೆ ಸೇರಿಕೊಂಡೆ. ಈ ಕ್ಷಿಪ್ರಕಾಲದಲ್ಲಿ ಉಪಾಧ್ಯಾಯರಿಗಾಗಲಿ ಅಥವಾ ಸಹಪಾಠಿಗಳಿಗಾಗಲೀ ನಾನೆಂದೂ ಸುಳ್ಳುಹೇಳಿದಂತೆ ನೆನಪಿಲ್ಲ. ಅಲ್ಲದೆ ನಾನು ತುಂಬಾ ಸಂಕೋಚ ಸ್ವಭಾವದವನಾಗಿದ್ದು ಎಲ್ಲ ಸಹಪಾಠಿಗಳಿಂದ ದೂರವಾಗಿರುತ್ತಿದ್ದೆ. ನನ್ನ ಪುಸ್ತಕಗಳು ಹಾಗೂ ಪಾಠಗಳೇ ನನ್ನ ಏಕೈಕ ಸಂಗಾತಿಗಳಾಗಿದ್ದವು. ಶಾಲೆಗೆ ಸರಿಯಾದ ಸಮಯಕ್ಕೆ ಹಾಜರಾಗುವುದು ಹಾಗೂ ಶಾಲೆ ಮುಗಿದ ನಂತರ ಮನೆಗೆ ಓಡುವುದು ನನ್ನ ದಿನನಿತ್ಯದ ರೂಢಿಯಾಗಿತ್ತು. ವಾಸ್ತವವಾಗಿ ನಾನು ಶಾಲೆಯಿಂದ ನೇರ ಮನೆಗೆ ಓಡುತ್ತಿದ್ದೆ ಏಕೆಂದರೆ ನಾನು ಯಾರ ಜೊತೆಯೂ ಮಾತನಾಡಲು ಇಷ್ಟಪಡುತ್ತಿರಲಿಲ್ಲ; ಅಲ್ಲದೆ ಯಾರಾದರೂ ನನ್ನ ಬಗ್ಗೆ ಲೇವಡಿ ಮಾಡಬಹುದೆಂಬ ಅಧೈರ್ಯವೂ ಸೇರಿಕೊಂಡಿತ್ತು.

ನಾನು ಪ್ರೌಢಶಾಲೆಯ ಮೊದಲ ತರಗತಿಯಲ್ಲಿದ್ದಾಗ ಪರೀಕ್ಷೆಯ ಸಂದರ್ಭದಲ್ಲಿ ನಡೆದ ಘಟನೆಯೊಂದು ಪ್ರಸ್ತಾಪಿಸಲು ಅರ್ಹವಾಗಿದೆ. ಮಿ. ಗೈಲ್ಸ್‌ರವರು ವಿದ್ಯಾಭ್ಯಾಸ ತಪಾಸಣಾಧಿಕಾರಿಗಳಾಗಿದ್ದು ತಮ್ಮ ತಪಾಸಣೆಯ ಸಲುವಾಗಿ ಶಾಲೆಗೆ ಬಂದಿದ್ದರು. ಅವರು ಐದು ಪದಗಳನ್ನು ಪರೀಕ್ಷೆಗೆಂದು ಆಯ್ಕೆಮಾಡಿದ್ದರು. ಕೆಟಲ್ (Kettle) ಎಂಬ ಪದ ಅವುಗಳಲ್ಲೊಂದು. ನಾನು ಅದನ್ನು ತಪ್ಪಾಗಿ ಬರೆದಿದ್ದೆ. ನಮ್ಮ ಉಪಾಧ್ಯಾಯರು ತಮ್ಮ ಪಾದರಕ್ಷೆಯಿಂದ (boot) ನನಗೆ ಸೂಚನೆಯನ್ನು ಕೊಡಲು ಪ್ರಯತ್ನ ಮಾಡಿದರಾದರೂ ನಾನು ಆ ಸೂಚನೆಯನ್ನು ತೆಗೆದುಕೊಳ್ಳಲಿಲ್ಲ. ನನ್ನ ಪಕ್ಕದಲ್ಲಿ ಕುಳಿತಿದ್ದ ವಿದ್ಯಾರ್ಥಿಯ ಹಲಗೆಯಿಂದ ಅದರ ಸ್ಪೆಲಿಂಗನ್ನು ನಕಲು ಮಾಡುವುದು ನನ್ನ ಊಹೆಗೆ ಮೀರಿದುದಾಗಿತ್ತು. ಏಕೆಂದರೆ ಉಪಾಧ್ಯಾಯರು ನಾವು



(Contd.)

ನಕಲುಮಾಡದಂತೆ ಕಾಯಲೆಂದೇ ಅಲ್ಲಿ ನಿಯುಕ್ತಗೊಂಡಿದ್ದಾರೆ ಎಂದು ನನ್ನ ಭಾವನೆ ಇತ್ತು. ಇದರ ಫಲಿತಾಂಶವೆಂದರೆ ನನ್ನನ್ನು ಹೊರತು ಪಡಿಸಿದಂತೆ ಬೇರೆಲ್ಲ ವಿದ್ಯಾರ್ಥಿಗಳು ಸರಿಯಾದ ಸ್ಪೆಲಿಂಗನ್ನು ಬರೆದಿದ್ದರು. ಕೇವಲ ನಾನು ಮಾತ್ರ ಮೂರ್ಖನಾಗಿದ್ದೆ. ಉಪಾಧ್ಯಾಯರು ನಂತರದಲ್ಲಿ ನನಗೆ ನನ್ನ ಮೂರ್ಖತೆಯನ್ನು ಮನಗಾಣಿಸುವ ಪ್ರಯತ್ನ ಮಾಡಿದರು. ಆದರೆ ಅದು ಫಲಕಾರಿಯಾಗಲಿಲ್ಲ. ನಾನೆಂದೂ ನಕಲು ಮಾಡುವ ಕಲೆಯನ್ನು ಕಲಿಯಲಾಗಲಿಲ್ಲ.

ಇಷ್ಟಾಗಿಯೂ ಈ ಘಟನೆ ನನಗೆ ಉಪಾಧ್ಯಾಯರಲ್ಲಿದ್ದ ಗೌರವವನ್ನು ಎಳ್ಳಷ್ಟೂ ಕಡಿಮೆ ಮಾಡಲಿಲ್ಲ. ಸ್ವಭಾವತಃ ನಾನು ಹಿರಿಯರ ಕುಂದುಗಳ ಬಗ್ಗೆ ಕುರುಡನಂತಿದ್ದೆ. ತದನಂತರದಲ್ಲಿ ನಾನು ಈ ಉಪಾಧ್ಯಾಯರ ಇನ್ನೂ ಕೆಲವು ಮಿತಿಗಳನ್ನು ಕಂಡು ಕೊಂಡೆನಾದರೂ ನಾನು ಅವರ ಬಗ್ಗೆ ಇಟ್ಟಿದ್ದ ಗೌರವ ಹಾಗೇ ಉಳಿದುಕೊಂಡು ಬಂದಿತು. ನಾನು ನನ್ನ ಹಿರಿಯರ ಆಜ್ಞೆಗಳನ್ನು ಗೌರವಿಸುವುದನ್ನು ಕಲಿತಿದ್ದೇನೇ ಹೊರತು ಅವರ ನಡವಳಿಕೆಯನ್ನು ಪರೀಕ್ಷೆಗೆ ಒಳಪಡಿಸುವುದನ್ನಲ್ಲ.

ಈ ಅವಧಿಯ ಇದೇ ರೀತಿಯ ಇನ್ನೆರಡು ಘಟನೆಗಳು ನನ್ನ ಮನಸ್ಸಿನಲ್ಲಿ ಅಂಟಿಕೊಂಡಿವೆ. ನಿಯಮ ಎಂಬಂತೆ ನಾನು ಶಾಲೆಯ ಪಠ್ಯಪುಸ್ತಕಗಳಿಗೆ ಹೊರತಾದ ಯಾವುದೇ ಓದಿನ ಬಗ್ಗೆ ಅಭಿರುಚಿ ಬೆಳಸಿಕೊಂಡಿರಲಿಲ್ಲ. ದಿನ ನಿತ್ಯದ ಪಾಠಗಳನ್ನು ನಾನು ಓದಲೇ ಬೇಕಿತ್ತು ಏಕೆಂದರೆ ನಾನು ಉಪಾಧ್ಯಾಯರಿಗೆ ಮೋಸಮಾಡುವುದನ್ನು ಇಷ್ಟ ಪಡದಿರುವಷ್ಟೇ ಅವರು ನನ್ನನ್ನು ತರಗತಿಗೆ ತೆಗೆದುಕೊಳ್ಳುವುದನ್ನೂ ಇಷ್ಟಪಡುತ್ತಿರಲಿಲ್ಲ. ಆದ್ದರಿಂದ ನಾನು ಶಾಲಾ ಪಾಠಗಳನ್ನು ಅಗತ್ಯವಾಗಿ ಮುಗಿಸುತ್ತಿದ್ದೆನಾದರೂ ಅದನ್ನು ಮನಸ್ಸಿಟ್ಟು ಮಾಡುತ್ತಿರಲಿಲ್ಲ. ಹೀಗಾಗಿ ಶಾಲಾಪಾಠಗಳನ್ನು ನಾನು ಸಮರ್ಪಕವಾಗಿ ಮಾಡಲಾಗದಿದ್ದರೂ

 (Contd.)

ಕೂಡ ಯಾವುದೇ ಪಠ್ಯೇತರ ಓದಿನ ಸವಾಲು ಏಳುವಂತೆಯೇ ಇರಲಿಲ್ಲ. ಆದರೆ ಒಂದು ಬಾರಿ ಹೇಗೋ ಏನೋ ನನ್ನ ಕಣ್ಣು ನಮ್ಮ ತಂದೆ ಖರೀದಿಸಿದ್ದ ಪುಸ್ತಕವೊಂದರ ಮೇಲೆ ಬಿದ್ದಿತು. ಅದು 'ಶ್ರವಣನ ಪಿತೃಭಕ್ತಿ 'ನಾಟಕ'ದ ಪ್ರತಿಯಾಗಿತ್ತು. ನಾನು ಅದನ್ನು ಮನಸ್ಸಿಟ್ಟು ಓದಿದೆ. ಅದೇ ಸಮಯದಲ್ಲೇ ಪಟ ಚಿತ್ರದಾಟದ ಸಂಚಾರಿ ಪ್ರದರ್ಶನಕಾರರ ತಂಡವೊಂದು ನಮ್ಮ ಸ್ಥಳಕ್ಕೆ ಬಂದಿತ್ತು. ಅವರು ತೋರಿಸಿದ ಆಟದ ಚಿತ್ರಗಳಲ್ಲಿ ಒಂದು ಶ್ರವಣಕುಮಾರ ತನ್ನ ಅಂಧಮಾತಾಪಿತೃಗಳನ್ನು ಕಾವಡಿಯಲ್ಲಿ ಕೂರಿಸಿ ಹೆಗಲ ಮೇಲೆ ಕೊಂಡೊಯ್ಯುತ್ತಿರುವ ದೃಶ್ಯವಾಗಿತ್ತು. ನಾನು ಓದಿದ್ದ ಪುಸ್ತಕ ಹಾಗೂ ಈ ಆಟದ ಚಿತ್ರಗಳು ನನ್ನ ಮನಸ್ಸಿನ ಮೇಲೆ ಅಳಿಸಲಾಗದಂತಹ ಪರಿಣಾಮವನ್ನು ಮಾಡಿದವು. ಆ ಸಂದರ್ಭದ ಕರುಳು ಕರಗಿಸುವಂತಹ ಹಾಡಿನ ಧಾಟಿ ನನ್ನನ್ನು ಆಳವಾಗಿ ಪ್ರಭಾವಿಸಿತು ಹಾಗೂ ಆ ಹಾಡನ್ನು ನಾನು ನಮ್ಮ ತಂದೆ ನನಗಾಗಿ ಖರೀದಿಸಿದ್ದ ವಾದ್ಯದಲ್ಲಿ ನುಡಿಸುವ ಪ್ರಯತ್ನವನ್ನೂ ಮಾಡಲು ಪ್ರೇರೇಪಿಸಿತು.

4. ಈ ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಅನುವಾದ ಮಾಡಿ:- 20

Tulasidas's imagery covers a vast range. No poet of medieval period — not even his great contemporary Surdas — can vie with Tulasidas in respect of the infinite variety of imagery employed by him. He has collected his images from peasant life, court life, priestly environments, rural and civic life, philosophical treatises, literary classics, mythological works and folk literature. His poetry is a vast gallery of all kinds of images ranging from exquisite miniature paintings to large frescoes. Normally he likes simple and integrated images, but is quite capable of creating complex imagery as well. What he seems to abhor is a truncated

image of which we can hardly search out a single example. His whole poetic creation is an endless endeavour to give a concrete tangible form to the abstract — to impart physical charms and mental qualities of human personality to an absolute concept. Actually the very conception of Personified Godhood is a grand exercise in image-making. In this context, what is of special relevance to the modern reader in Tulasidas's art is his unconventional approach to literary-cultural tradition and religion. A number of poets in other Indian languages have also produced great literature in this regard, but Tulasi appears to have surpassed them all.

5. ಕೆಳಗೆ ನೀಡಿರುವ ಗದ್ಯಭಾಗವನ್ನು ಇಂಗ್ಲೀಷಿಗೆ ಅನುವಾದ ಮಾಡಿ :- 20

ಸೃಷ್ಟಿ, ಬೆಳವಣಿಗೆ ಮತ್ತು ರಕ್ಷಣೆಗಳು ಪ್ರಕೃತಿಯನ್ನು ಅವಲಂಬಿಸಿವೆ ಹಾಗೂ ಪ್ರಕೃತಿಯ ಸೃಷ್ಟಿ ಮತ್ತು ರಕ್ಷಣೆಯಲ್ಲಿ ಮರಗಳು, ಕಾಡುಗಳು, ಬಳ್ಳಿಗಳು, ಗಿಡಗಳು ಮತ್ತು ಪೊದೆಗಳು ತೀರ ಪ್ರಾಮುಖ್ಯತೆಯನ್ನು ಪಡೆದಿವೆ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯವೇ ಆಗಿದೆ. ವಾಸ್ತವವಾಗಿ ಮಾನವನ ಅಸ್ತಿತ್ವವೇ ಮರಗಳು ಹಾಗೂ ಕಾಡುಗಳಿಗೆ ಅಂಟಿಕೊಂಡಿವೆ. ಮರಗಳು ಬಹಳಷ್ಟು ಮಣ್ಣಿನ ರಕ್ಷಕರು. ಬಿರುಗಾಳಿಗಳ ಹೊಡೆತವನ್ನು ತಡೆದು ಅವು ಮಣ್ಣನ್ನು ಪಲ್ಲಟವಾಗದಂತೆ ಉಳಿಸುತ್ತವೆ. ಮರಗಳು ಮಾತ್ರ ಪರ್ವತಗಳ ಸವೆದು ಹೋಗುವಿಕೆಯನ್ನು ಸ್ಥಗಿತಗೊಳಿಸಿ ಅವು ಸ್ಥಿರವಾಗಿರುವಂತೆ ಮಾಡಬಲ್ಲವು. ಅಲ್ಲದೆ ಕಾಡುಗಳು ಪಕ್ಷಿಗಳು ಹಾಗೂ ಪ್ರಾಣಿಗಳನ್ನು ರಕ್ಷಿಸುತ್ತವೆಯಲ್ಲದೆ ಆ ಮೂಲಕ ಪರಿಸರವನ್ನು ರಕ್ಷಿಸುವುದನ್ನು ಸಾಧ್ಯವಾಗಿಸುತ್ತವೆ. ಕಾಡುಗಳು ಮಳೆಯ ಕಾರಣಕರ್ತರೂ ಹೌದು.

ಎಲ್ಲಿ ವಿಫುಲವಾಗಿ ಮರಗಿಡಗಳಿರುತ್ತವೆಯೋ ಅಲ್ಲಿ ಹೇರಳವಾಗಿ ಮಳೆಯಾಗುವುದಲ್ಲದೆ ಅಂತಹ ಸೌಲಭ್ಯವಿಲ್ಲದ ಮರಳುಗಾಡುಗಳು ಮಳೆಗಾಗಿ ಹಾತೊರೆಯುವಂತಾಗುತ್ತದೆ. ಮಳೆ ಬೆಳೆಯನ್ನು ಬೆಳೆಯಲು ಸಾಧ್ಯ ಮಾಡಿದರೆ ಬೆಳೆ ಮಾನವನಿಗೆ ಬಾಳನ್ನು ಸಾಧ್ಯಮಾಡುತ್ತದೆ. ಅಲ್ಲದೆ ಪ್ರಾಣಿಗಳು ಮರಗಿಡಗಳ ಎಲೆಗಳನ್ನು ಹುಲ್ಲಿನಂತೆ ತಿನ್ನುವುದರ ಮೂಲಕ ಜೀವಿಸುತ್ತವೆ. ಮರಗಳಿಂದ ನಾವು ನಮಗೆ ಅಗತ್ಯವಾಗಿರುವ ಸೌದೆಯನ್ನೂ ಹಾಗೂ ಮನೆಯನ್ನು ಕಟ್ಟಲು ಅಗತ್ಯವಾಗಿರುವ ಸಾಗುವಾನಿಯನ್ನೂ ಪಡೆಯುತ್ತೇವೆ. ಮರಗಳಿಂದ ಪಡೆದ ಸಾಗುವಾನಿಯನ್ನು ನಾವು ರೈಲು, ಹಡಗು, ವಿಮಾನ ಹಾಗೂ ಅನ್ಯ ಸಾರಿಗೆ ಸಂಪರ್ಕ ಸೌಕರ್ಯಗಳಿಗೆ ಬಳಸಿಕೊಳ್ಳುತ್ತೇವೆ. ಮರಗಳು ವಿವಿಧ ಔಷಧಿಗಳು, ಅಂಟುಗಳು, ಕಾಗದ, ಬೆಂಕಿಕಡ್ಡಿ, ಬಗೆಬಗೆಯ ತೈಲಗಳು ಹಾಗೂ ಅನೇಕ ರುಚಿಕರವಾದ ಹಾಗೂ ಪುಷ್ಟಿದಾಯಕವಾದ ಹಣ್ಣುಗಳ ನಿರಂತರ ಸಂಪನ್ಮೂಲವಾಗಿದೆ. ಮರಗಳ ತಣ್ಣನೆಯ ನೆರಳು ನಮಗೆ ಸೂರ್ಯನ ತಾಪದಿಂದ ಅಹ್ಲಾದಕರವಾದ ಪರಿಹಾರವನ್ನು ನೀಡುತ್ತದೆ. ಅವುಗಳ ಹೂವಿನ ಸವಿಯಾದ ಸುಗಂಧ ನಮ್ಮ ಮನಸ್ಸು ಮತ್ತು ಆತ್ಮವನ್ನು ಹೊಚ್ಚ ಹೊಸತನದಿಂದ ತುಂಬುತ್ತದೆ.

6. (a) ಕೆಳಗೆ ನೀಡಿರುವ ವಿಷಯಗಳಲ್ಲಿ **ಒಂದನ್ನು** ಕುರಿತು 200 ಪದಗಳಿಗೆ ಮೀರದಂತೆ ಪತ್ರಿಕಾ ಸಂಪಾದಕರಿಗೆ ಒಂದು ಪತ್ರವನ್ನು ಬರೆಯಿರಿ :– 20

(i) ಏರುತ್ತಿರುವ ಬೆಲೆಗಳು

(ii) ಕನ್ನಡ ಮಾಧ್ಯಮದ ಅಗತ್ಯ

(iii) ಕ್ರೀಡಾರಂಗದ ಉತ್ಥಾನಕ್ಕೆ ಒಂದು ರಣನೀತಿ.

(b) ಕೆಳಗೆ ನೀಡಿರುವ ಹೇಳಿಕೆಗಳಲ್ಲಿ ಯಾವುದಾದರೂ **ಒಂದರ** ಅರ್ಥ ಮತ್ತು ಸ್ವಾರಸ್ಯವನ್ನು ವಿವರಿಸಿ :– 10

(i) ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ

(ii) ಕಾರಿರುಳ ಪಟ್ಟಣಕೆ ಚಂದಿರನ ತೋರಣವ ಬಿಗಿದಂತೆ

(iii) ತುಪ್ಪದ ಗುಂಡಿ ತಿಪ್ಪೆಯ ಮೇಲೆ ಧೊಪ್ಪನೆ ಬಿತ್ತಲ್ಲಾ

(iv) ಶೆಟ್ಟಿ ಕೆಟ್ಟು ಪಟ್ಟಣ ಸೇರಿದ.

(c) ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗವನ್ನು ಸೂಕ್ತ ಪದಗಳಿಂದ ಭರ್ತಿಮಾಡಿ :- 10

(i) 'ಇನ್ನೂ ಯಾಕ ಬರಲಿಲ್ಲಾಂವ ಹುಬ್ಬಳ್ಳಿಯಾಂವ' ಎಂಬ ಸಾಲನ್ನು ಬರೆದವರು ——————.

(ii) 'ಗುಹೇಶ್ವರಾ' ಎಂಬ ಅಂಕಿತನಾಮದ ವಚನಗಳ ಕರ್ತೃ ——————.

(iii) 'ಕುಮಾರರಾಮ ಚರಿತೆ' ಎಂಬ ಕಾವ್ಯದ ಕರ್ತೃ —— ——————.

(iv) 'ಇತ್ತೀಚೆಗೆ' ಜ್ಞಾನಪೀಠ ಪ್ರಶಸ್ತಿ'ಯನ್ನು ಪಡೆದ ಕನ್ನಡ ಲೇಖಕರ ಹೆಸರು ——————.

(v) 'ಓನನ್ನ ಚೇತನ ಆಗು ನೀ ಅನಿಕೇತನ' ಎಂಬ ಸಾಲನ್ನು ಬರೆದ ಕನ್ನಡ ಕವಿಯ ಹೆಸರು ——————.

(vi) ನಾ ಡೊಂಕಾದರೆ ನಿನ್ನ ನಾಮ ——————.

(vii) 'ಮೈಸೂರು ಮಲ್ಲಿಗೆ' ಕವನ ಸಂಕಲನದ ಕರ್ತೃ —— ——————.

(viii) ಕನ್ನಡ ರಂಗಭೂಮಿಯಲ್ಲಿ ದುಷ್ಯಂತನ ಪಾತ್ರಕ್ಕೆ ಹೆಸರಾಂತ ನಟನ ಹೆಸರು ——————.

(ix) ಕೈಲಾಸಂ ಬರೆದ ಮೊದಲ ಕನ್ನಡ ನಾಟಕದ ಹೆಸರು ———.

(x) ಶಿವರಾಮ ಕಾರಾಂತರಿಗೆ 'ಜ್ಞಾನಪೀಠ ಪ್ರಶಸ್ತಿ' ತಂದುಕೊಟ್ಟ ಕೃತಿಯ ಹೆಸರು ——————.

Sr. No.

**F–DTN–L–SAD–G**

अपना अनुक्रमांक इन पत्रकों पर न लिखें

DO NOT WRITE YOUR ROLL NO. ON THESE SHEETS

# KANNADA
# (Compulsory)

सार लेखन के लिए विशेष पत्रक

**SPECIAL SHEETS FOR PRECIS**

इस पत्रक के दोनों ओर लिखिए। प्रत्येक खण्ड में एक शब्द और प्रत्येक पंक्ति में पांच शब्द लिखिए। अपने उद्धरण में सामान्य रूप से विराम आदि चिन्ह लगाइए और यदि आवश्यक हो तो प्रत्येक पैराग्राफ के अन्त में एक पंक्ति खाली छोड़ते हुए इसे पैराग्राफों में विभक्त कीजिए। यदि चाहें तो उत्तर-पुस्तिका के साधारण कागज पर पहले एक कच्चा प्रारूप तैयार कर सकते हैं। अपनी उत्तर-पुस्तिका दे देने से पहले कच्चे कार्य को आर-पार पंक्ति डालकर काट दिया जाना चाहिए। आप सारपत्रक को अपनी उत्तर-पुस्तिका के अन्दर सुरक्षित रूप से बांध दीजिए।

**Use both sides of this sheet. Write one word in each division and five words in each line. Punctuate your passage in the usual way and divide it into paragraphs, if necessary, leaving a line blank at the end of each paragraph. You may make a rough copy first, if you so wish, on ordinary paper in the answer-book. The rough work should be scored through before you hand over your answer-book. You should fasten the precis sheet securely inside your answer-book.**

| शीर्षक Title | | | | | इस हाशिए में न लिखें Do not write on this margin |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |

| | | | | | |
|---|---|---|---|---|---|
| | | | | | 70 |
| | | | | | 80 |
| | | | | | 90 |
| | | | | | 100 |
| | | | | | 110 |
| | | | | | 120 |
| | | | | | 130 |
| | | | | | 140 |
| | | | | | 150 |
| | | | | | 160 |
| | | | | | 170 |
| | | | | | 180 |

| | | | | | |
|---|---|---|---|---|---|
| | | | | | 190 |
| | | | | | 200 |
| | | | | | 210 |
| | | | | | 220 |
| | | | | | 230 |
| | | | | | 240 |
| | | | | | 250 |
| | | | | | 260 |
| | | | | | 270 |
| | | | | | 280 |
| | | | | | 290 |
| | | | | | 300 |